# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಶಿವಾಜಿನಗರ ಉಪವಿಭಾಗ ಹಲಸೂರು ಕೆರೆರಸ್ತೆ, ಬೆಂಗಳೂರು-42**

ದಿನಾಂಕ:25-05-2022

ಸಂಖ್ಯೆ:ಸ.ಇಂ/ವಾ-91/ವಾರ್ಡ್‌ಸಭೆ/ 02 /2022-23

## ವಾರ್ಡ್-91 ರ ವಾರ್ಡ್ ಸಭೆಯ ನಡವಳಿ

ದಿನಾಂಕ: 25-05-2022 ರಂದು ಶಿವಾಜಿನಗರ ಉಪ ವಿಭಾಗ ವಾರ್ಡ್-91, ಭಾರತಿನಗರ ವಾರ್ಡ್ ಕಛೇರಿಯಲ್ಲಿ ಶ್ರೀ.ರವಿ, ವಾರ್ಡ್-91 ರ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿ.

**ಹಾಜರಿದ್ದವರು:**

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಪದನಾಮ / ಇಲಾಖೆ |
|---|---|---|
| 1 | ಶ್ರೀ ರವಿ | ಸಹಾಯಕ ನಿಯಂತ್ರಕರು (ಹಣಕಾಸು-ದಕ್ಷಿಣ) ಹಾಗೂ ನೋಡಲ್ ಅಧಿಕಾರಿ ವಾರ್ಡ್-91 |
| 2 | ಶ್ರೀ ಬೀಮಾನಾಯ್ಕ | ಸಕಾನಿಅ ಶಿವಾಜಿನಗರ ಉಪ ವಿಭಾಗ |
| 3 | ಶ್ರೀ ನವೀನ್ | ಆರೋಗ್ಯ ವೈದ್ಯಾಧಿಕಾರಿ, ಶಿವಾಜಿನಗರ ವಲಯ |
| 4 | ಶ್ರೀಮತಿ ಜ್ಯೋತಿಲಕ್ಷ್ಮೀ | ಸ.ಕ.ಅ(ಶಿವಾಜಿನಗರ) |
| 5 | ಶ್ರೀ ಪ್ರವೀಣ್.ಎನ್.ಎಂ, | ಸಅ ಹಾಗೂ ಕಾರ್ಯದರ್ಶಿ ಮತ್ತು ಸಂಚಾಲಕರು ವಾರ್ಡ್ ಸಂಖ್ಯೆ:91 |
| 6 | ಶ್ರೀ ಜಾವೀದ್ | ಸಕಾನಿಅ(ಘ.ತ್ಯಾ.ನಿ) ಶಿವಾಜಿನಗರ ವಿಭಾಗ (ಪ್ರಭಾರೆ) |
| 7 | ಶ್ರೀ ಸತೀಶ್, | ಕಂದಾಯ ಪರಿವೀಕ್ಷಕರು |
| 8 | ಶ್ರೀ ರಾಜೇಶ್, | ಸ.ಅ(ಬಿ.ಡಬ್ಲ್ಯೂ.ಎಸ್.ಎಸ್.ಬಿ) |
| 9 | ಶ್ರೀ ಲಕ್ಷ್ಮಣ್, | ಸ.ಅ(ಬೆಸ್ಕಾಂ) |
| 10 | ಶ್ರೀ ಕಾರ್ತಿಕ್ | ಕಿರಿಯ ಆರೋಗ್ಯ ಪರಿವೀಕ್ಷಕರು |

**ಮಾನ್ಯ ನೋಡಲ್ ಅಧಿಕಾರಿರವರು ಸ್ವಾಗತದೊಂದಿಗೆ ಅಧಿಕಾರಿಗಳ / ಹಾಜರಿದ್ದವರ ಪರಸ್ಪರ ಪರಿಚಯದೊಂದಿಗೆ ಸಭೆಯನ್ನು ಪ್ರಾರಂಬಿಸಲಾಯಿತು.**

1) **ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:** ಶಿವಾಜಿನಗರ ಉಪ ವಿಭಾಗದ ವಾರ್ಡ್ ಸಂಖ್ಯೆ:91ರ ವ್ಯಾಪ್ತಿಯಲ್ಲಿ ಸಾರ್ವಜನಿಕರ ಆರೋಗ್ಯ ಕೇಂದ್ರದ ವೈಧ್ಯಾಧಿಕಾರಿಗಳು ಕೋವಿಡ್ ಪರೀಕ್ಷೆಯ ವಿವರಗಳನ್ನು ಸಭೆಗೆ ನೀಡಿರುತ್ತಾರೆ. ಮತ್ತು ಬಿಬಿಎಂಪಿ ಎಸ್‌ಡಬ್ಲ್ಯೂಎಂ ಸಿಬ್ಬಂದಿರವರಿಗೆ 3ನೇ ಡೋಸ್ ಲಸಿಕೆಯನ್ನು ಅನ್ನು ಪಡೆಯಲು ಕ್ರಮವಹಿಸಲು ತಿಳಿಸಿರುತ್ತಾರೆ.

- ಪೆಡಿಗ್ರಿವ್ ಸ್ಟ್ರೀಟ್ ಡೆಬ್ರಿಸ್ ವಿಲೇವಾರಿಯಾಗದಿರುವ ಬಗ್ಗೆ ರೆಸಿಡೆನ್ಸಿರವರು ದೂರು ನೀಡಿದ್ದು, ಕಸವನ್ನು ವಿಲೇವಾರಿ ಮಾಡಲು ಸಹಾಯಕ ಕಾರ್ಯಪಾಲಕ ಅಭಿಯಂತರರು (ಶಿವಾಜಿನಗರ) ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ (ಶಿವಾಜಿನಗರ) ರವರಿಗೆ ತಿಳಿಸಿರುತ್ತಾರೆ.

- ಪೆಡಿಗ್ರಿವ್ ಸ್ಟ್ರೀಟ್‌ನಲ್ಲಿರುವ ಟ್ರಾನ್ಸ್‌ಫಾರ್ಮರ್ ಸುತ್ತ ಬೇಲಿಯನ್ನು ಹಾಕಲು ಬೆಸ್ಕಾಂ ರವರಿಗೆ ಸೂಕ್ತ ಕ್ರಮವಹಿಸಲು ತಿಳಿಸಿರುತ್ತಾರೆ.

**ಬೆಸ್ಕಾಂ (ಶಿವಾಜಿನಗರ)**

- ವಾರ್ಡ್ ಸಂಖ್ಯೆ:91 ರ ಭಾರತಿನಗರ ವ್ಯಾಪ್ತಿಯಲ್ಲಿ ಟ್ರಾಫಿಕ್ ಪೋಲಿಸ್ ಠಾಣೆರವರಿಗೆ ಪೆಡಿಗ್ರೀವ್ ಸ್ಟ್ರೀಟ್‌ನಲ್ಲಿ ಅನಧಿಕೃತ ವಾಹನಗಳನ್ನು ತೆರವುಗೊಳಸಲು ತಿಳಸಿರುತ್ತಾರೆ.

- ನೋಡಲ್ ಅಧಿಕಾರಿರವರು ಮಾತಾನಾಡುತ್ತ ಕಾಮರಾಜ್ ರಸ್ತೆ ಫುಟ್‌ಪಾತ್ ಮೇಲೆ ವ್ಯಾಪಾರ ವಹಿವಾಟುಗಳು ಹೆಚ್ಚಾಗಿದ್ದು ಜನರ ಓಡಾಟ ಹೆಚ್ಚಾಗಿರುವುದರಿಂದ ರಸ್ತೆಗಳ ಮೇಲೆ ವಾಹನಗಳು ಸಂಚರಿಸುವುದು ಕಷ್ಟಕರವಾಗಿರುತ್ತದೆ ಆದ ಕಾರಣ ಫುಟ್‌ಪಾತ್ ಮೇಲೆ ವ್ಯಾಪಾರ ಮಾಡುತ್ತಿರುವವರನ್ನು ಕೂಡಲೆ ತೆರವುಗೊಳಸಲು ತಿಳಸಿರುತ್ತಾರೆ.

**ಟ್ರಾಫಿಕ್ ಪೋಲಿಸ್ ಠಾಣೆ ಭಾರತಿನಗರ**

- ಮಳೆಯಿಂದಾಗಿ ಹಾನಿಯಾಗಿರುವ ಕುಟುಂಬಗಳಿಗೆ ಸರ್ಕಾರವು ಸೂಚಿಸಿರುವ ಅನುದಾನವನ್ನು ಸಂತ್ರಸ್ಥರಿಗೆ ಬಿಡುಗಡೆ ಮಾಡಿ ಕ್ರಮವಹಿಸಲು ಸೂಚಿಸಿರುತ್ತಾರೆ.
- ಕಾಮರಾಜ್ ರಸ್ತೆಯ ವಾರ್ಡಿನಲ್ಲಿ ತಳ್ಳುವ ಗಾಡಿಗಳ ಕೊರತೆ ಇದ್ದು, ಸರಿಯಾಗಿ ಕಸ ವಿಲೇವಾರಿಯಾಗುತಿಲ್ಲದಿರುವುದು ಕಂಡು ಬಂದಿದ್ದು ಇದರ ಬಗ್ಗೆ ಸಾರ್ವಜನಿಕರಿಂದ ಸಾಕಷ್ಟು ದೂರು ಬಂದಿರುತ್ತದೆ ಹಾಗೂ ಪೌರಕಾರ್ಮಿಕರನ್ನು ವಿಚಾರಿಸಿದ್ದಲ್ಲಿ ಅವರಿಗೆ ತಳ್ಳುವ ಗಾಡಿ (Push Cart) ಕೊರತೆ ಇದ್ದು ಆದಷ್ಟು ಬೇಗ ಇವರಿಗೆ ತಳ್ಳುವ ಗಾಡಿ (Push Cart) ನೀಡಲು ಸೂಚಿಸಿದೆ.

**ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ ಶಿವಾಜಿನಗರ)**

- ನೋಡಲ್ ಅಧಿಕಾರಿ ರವರು ಮಾತನಾಡುತ್ತ OFC Cable ಅಳವಡಿಕೆಯು ಜಾಸ್ತಿಯಾಗಿರುವುದರಿಂದ ಕೂಡಲೇ ತೆರವುಗೊಳಸಲು ತಿಳಸಿರುತ್ತಾರೆ.
- ವಾರ್ಡ್ ಪ್ರದೇಶದ ರಸ್ತೆಗಳಲ್ಲಿ ಮತ್ತು ಪಾದಚಾರಿ ರಸ್ತೆಗಳಲ್ಲಿ ಮಣ್ಣು ಮತ್ತು ಅನುಪಯುಕ್ತ ಡೆಬ್ರೀಸ್‌ನ್ನು ರಾತ್ರಿ ಹೊತ್ತಿನಲ್ಲಿ ಸುರಿಯುತ್ತಿದ್ದು, ಇದರಿಂದ ಸಾರ್ವಜನಿಕರಿಗೆ ಹಾಗೂ ಪಾದಚಾರಿಗಳಿಗೆ ಓಡಾಡಲು ತುಂಬಾ ತೊಂದರೆಯುಂಟಾಗುತ್ತಿರುತ್ತದೆ, ಆದುದರಿಂದ ಸದರಿ ಮಣ್ಣು ಮತ್ತು ಅನುಪಯುಕ್ತ ಡೆಬ್ರೀಸನ್ನು ತೆರವುಗೊಳಸಲು ಅವಶ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ. ಈ ಸಂಬಂಧ ಸಭೆಯಲ್ಲಿ ಹಾಜರಿದ್ದ ಸಹಾಯಕ ಕಾರ್ಯಪಾಲಕ ಅಭಿಯಂತರರು ಮಾತನಾಡುತ್ತಾ, ಸದರಿ ವಿಷಯದ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಸಿರುತ್ತಾರೆ.
- ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಸಕಾದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಂಡು ಎಲ್ಲಾ ಇಲಾಖೆಗೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು ಹಾಗು ಹಾಜರಿದ್ದ ಸಾರ್ವಜನಿಕರಿಗೆ ಕಸ ವಿಲೇವಾರಿ ಬಗ್ಗೆ ಆದಷ್ಟು ಗಮನವಹಿಸಿ ಸಹಕರಿಸಿದಲ್ಲಿ ದಿನನಿತ್ಯದ ಕಸ ವಿಲೇವಾರಿ ಸಮಯದಲ್ಲಿ ಸಮರ್ಪಕವಾಗಿ ನಿರ್ವಹಿಸಲು ಗುತ್ತಿಗೆದಾರರು ಸಹಾಯವಾಗುತ್ತದೆ.

ಕಾರ್ಯದರ್ಶಿಯವರು ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಸಲಾಯಿತು.

ನೋಡಲ್ ಅಧಿಕಾರಿರವರ ಸೂಚನೆಗಳಂತೆ ನಡವಳಿಗಳನ್ನು ತಯಾರಿಸಿ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಲು ಸೂಚಿಸಿರುತ್ತಾರೆ.

(ಪ್ರವೀಣ್ ಎನ್.ಎಂ)
28/10/2022
ಸ.ಅ.ಕಾರ್ಯದರ್ಶಿ
ವಾರ್ಡ್–91, ಭಾರತಿನಗರ